ದಿನಾಂಕ: 06.11.2025 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ವಾದಿಗಳ ಪರ ಶ್ರೀ ಜಿ ಸಿ ಎಂ ವಕೀಲರಿಂದಃ**

ಪ್ರತಿವಾದಿ ನನಗೆ ಹೆಂಡತಿಯಾಗಬೇಕು. ಮುಂಚೆ ನಾನು ಚಿನ್ನ ಬೆಳ್ಳಿ ಕೆಲಸ ಮಾಡುತಿದ್ದೆ ಈಗ ನಾನು ಚಿನ್ನ ರಿಪೇರಿ ಕೆಲಸ ಮಾಡುತ್ತಿದ್ದೇನೆ. ಚಿನ್ನಕ್ಕೆ ಒಂದೊಂದು ಮಿಲೀಗ್ರಾಮಗೂ ಕೂಡ ಬೇಲೆ ಇದೆ ಎಂದರೆ ನಿಜ. ನಾನು ಮನೆಯಲ್ಲಿಯೇ ಕುಳಿತು ಚಿನ್ನದ ಕೆಲಸ ಮಾಡುತ್ತಿದ್ದೆ. ರಿಜಿಸ್ಟೇಷನ್ ದಾಖಲೆಗಳನ್ನು ನೊಂದಾಯಿತ ಮಾಡುವ ಬಗ್ಗೆ ಮಾಹಿತಿ ಇರುತ್ತದೆ. ನಾನು ಶ್ವೇತ ಎನ್ನುವವರಿಗೆ ಬೇರೆ ಆಸ್ತಿಯನ್ನು ಮಾರಾಟ ಮಾಡಿದ್ದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಈ ದಾವೆಯಲ್ಲಿ ಕರಾರನ್ನು ರಿನೀವಲ್ ಮಾಡಿಕೊಡುತ್ತೇನೆ ಎಂದು ಹೇಳಿ ರಿಜಿಸ್ಟರ್ ಮಾಡಿಕೊಂಡಿರುತ್ತಾರೆ.

ವಾದ ಪತ್ರ ಸಲ್ಲಿಸಲು ನಮ್ಮ ವಕೀಲರಿಗೆ ನಾನೇ ಮಾಹಿತಿ ನೀಡಿದ್ದೇನೆ. ನಾನೊಬ್ಬನೇ ಬರೆಸಿ ಹಾಕಿರುತ್ತೇನೆ. ದಾವೆಯಲ್ಲಿ ಸಲ್ಲಿಸಿದ ದಾಖಲೆಗಳನ್ನು ಹೊರತು ಪಡಿಸಿ ಬೇರೆ ದಾಖಲೆಗಳು ನನ್ನ ಬಳಿ ಇಲ್ಲ. ನಾನು ವಾದಿಯ ವಿರುದ್ಧ ಯಾವುದೇ ದೂರನ್ನು ದಾಖಲಿಸಿಲ್ಲ . ಕಾರಾರನ್ನು ರಿನೀವಲ್ ಮಾಡಿಕೊಳ್ಳುತ್ತೇನೆ ಎಂದು ಹೇಳಿ ರಿಜಿಸ್ಟರ್ ಮಾಡಿಕೊಂಡಿದ್ದಾರೆ ಎಂಬ ವಿಚಾರವನ್ನು ನಾನು ನನ್ನ ಪ್ರತಿವಾದ ಪತ್ರದಲ್ಲಿ ಬರೆಸಿರುವುದಿಲ್ಲ. ನನ್ನ ಹೆಂಡತಿ , ನನ್ನ ಮದ್ಯೆ ಮತ್ತು ವಾದಿಮದ್ಯೆ ಆದ ಆಸ್ತಿ ಬಗ್ಗೆ ಮಾಹಿತಿ ಇರುತ್ತದೆ. ನಿಡಿ-1 ರಲ್ಲಿರುವ ಸಾಕ್ಷಿದಾರರಾಗಿ ಕಾಣಿಸಿರುವ ಎಸ್ ಕೆ ನಾಗರಾಜಾಚಾರ್ ಎನ್ನುವ ಹೆಸರಿನ ಸಮಕ್ಷದಲ್ಲಿರುವ ಸಹಿ ನನ್ನದಾಗಿರುತ್ತದೆ.

ನಿಡಿ-3 ರಿಂದ 8 ರಲ್ಲಿ ಸಾಕ್ಷಿದಾರರಾಗಿ ಕಾಣಿಸಿರುವ ಎಸ್ ಕೆ ನಾಗರಾಜಾಚಾರ್ ಎನ್ನುವ ಹೆಸರಿನ ಸಮಕ್ಷದಲ್ಲಿರುವ ಸಹಿಗಳು ನನ್ನದಾಗಿರುತ್ತವೆ. ನಿಪಿ-1 ರಲ್ಲಿರುವ ಸಹಿ ನನ್ನದಾಗಿರುತ್ತದೆ ಎಂದು ಸಾಕ್ಷಿ ಒಪ್ಪಿಕೊಂಡಿದ್ದರಿಂದ ವಾದಿಗಳ ಪರ ವಕೀಲರು ನಿಶಾನೆಗೊಳಿಸಲು ಕೋರಿಕೊಂಡಿದ್ದು ಸಹಿಯನ್ನು ನಿಪಿ-1(ಇ) ಎಂದು ಗುರುತಿಸಲಾಯಿತು. ನಿಪಿ-1(ಸಿ) ಸಹಿ ನನ್ನದಾಗಿರುತ್ತದೆ. ನೀವು ಸಾಲದ ಪ್ರಯುಕ್ತ ಕರಾರು ಪತ್ರವನ್ನು ಬರೆದುಕೊಡಿದ್ದೇನೆ ಎಂದು ನಮೂದು

ಮಾಡಿದಂತಹ ಯಾವುದಾದರೂ ದಾಖಲೆ ಹಾಜರುಪಡಿಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಎಲ್ಲಾ ದಾಖಲೆಗಳನ್ನು ವಾದಿ ತಯಾರುಮಾಡುತ್ತಿದ್ದರು ನಾನು ಸಹಿ ಮಾಡುತ್ತಿದ್ದೆ ಎಂದು ನುಡಿಯುತ್ತಾರೆ. ನನ್ನ ಮಗಳಿಗೆ ಮಗುವಾಗಿದ್ದು ಬಾಣಂತಿ ಮತ್ತು ಮಗುವನ್ನು ನೋಡಿಕೊಳ್ಳಲು ನನ್ನ ಹೆಂಡತಿ ಹೋಗಿರುತ್ತಾರೆ. ನನ್ನ ಹೆಂಡತಿ ಆರೋಗ್ಯ ಚೆನ್ನಾಗಿ ಇದೆ. ಯಾವ ತಿಂಗಳಲ್ಲಿ ನನ್ನ ಮಗಳಿಗೆ ಹೆರಿಗೆ ಆಯಿತುಎಂದು ನನಗೆ ನೆನಪಿಲ್ಲ. ನನ್ನ ಮಗಳು ಬಿ ಪಿ ಹೆಚ್ಚಾಗಿದ್ದು ಆಸ್ಪತ್ರೆಯಲ್ಲಿ ಇದ್ದರು. ನಿಡಿ-2 ರಲ್ಲಿ ಈ ವಿಚಾರವನ್ನು ಬರೆಸಿರುವುದಿಲ್ಲ.

ನಾನು ಮತ್ತು ನನ್ನ ಹೆಂಡತಿ ಒಟ್ಟಿಗೆ ಅಶ್ವಥಾಚಾರ್ ಬಳಿ ವ್ಯವಹಾರ ಮಾಡಿರುತ್ತೇವೆ . ಪ್ರತ್ಯೇಕವಾಗಿ ಮಾಡಿರುವುದಿಲ್ಲ. ನಿಡಿ- 1 ರಲ್ಲಿ ವಿಜಯಲಕ್ಷ್ಮಿ ಯವರು ಹಾಜರು ಪಡಿಸಿದ್ದು ಎಂದು ನಮೂದು ಇದೆ ಎಂದರೆ ಸಾಕ್ಷಿ ಎಲ್ಲವನ್ನು ವಾದಿಗಳೇ ಇಟ್ಟುಕೊಂಡಿದ್ದಾರೆ ಅವರೇ ತಯಾರು ಮಾಡಿದ್ದಾರೆ ಎಂದು ನುಡಿಯುತ್ತಾರೆ. ನಿಡಿ- 4 ರಲ್ಲಿ ವಿಜಯಲಕ್ಷ್ಮಿ ಯವರು ಹಾಜರು ಪಡಿಸಿದ್ದು ಎಂದು ನಮೂದು ಇದೆ ಎಂದರೆ ಸಾಕ್ಷಿ ಎಲ್ಲವನ್ನು ವಾದಿಗಳೇ ಇಟ್ಟುಕೊಂಡಿದ್ದಾರೆ ಅವರೇ ತಯಾರು ಮಾಡಿದ್ದಾರೆ ಎಂದು ನುಡಿಯುತ್ತಾರೆ. ಈ ವಿಚಾರವನ್ನು ನನ್ನ ತಕರಾರಿನಲ್ಲಿ ತಿಳಿಸಿರುವುದಿಲ್ಲ. ಈಗ ನಾನು ನನ್ನ ಹೆಂಡತಿ ಮಕ್ಕಳು ಜೊತೆಯಲ್ಲಿ ಇಲ್ಲ. ಈ ವ್ಯವಹಾರಕ್ಕೂ ಮತ್ತು ನನಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಎಲ್ಲಾ ವ್ಯವಹಾರ ಮಾಡಿ ಆಸ್ತಿ ಕೈತಪ್ಪಿ ಹೋಗಿತ್ತದೆ ಎಂದು ಬೇಸರದಲ್ಲಿ ನನ್ನನ್ನು ಹೊರಗೆ ಇಟ್ಟಿದ್ದಾರೆ ಎಂದು ನುಡಿಯುತ್ತಾರೆ.

ನೋಟೀಸ್ ನಿಡಿ- 11 ಬರೆಯುವ ಮೊದಲೇ ನನ್ನ ಹೆಂಡತಿಗೆ ನೋಟೀಸ್ ತಲುಪಿದೆ ಎಂದರೆ ಸರಿಯಲ್ಲ. ಸದರಿ ನೋಟೀಸ್ ಜಾರಿಯಾಗಿ ನನ್ನ ಹೆಂಡತಿ ತಕರಾರನ್ನು ಸಹ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಈ ದಾವೆ ಸಲ್ಲಿಸಿದ ನಂತರ ನಾವು ಯಾವುದೇ ವ್ಯವಹಾರ ಮಾಡಿಲ್ಲ. ಅಶ್ವಥಾಚಾರ್ ಗೆ ಬರೆದುಕೊಡುವ ಪೂರ್ವದಲ್ಲಿ ಫೈನಾನ್ಸ್ ನಲ್ಲಿ ಸಾಲ ಪಡೆದು ದಾಖಲೆ ಬರೆದುಕೊಟ್ಟು ತೀರಿಸಿರುತ್ತೇನೆ. ಎಷ್ಟು ಸಾಲ ಪಡೆದುಕೊಂಡಿದ್ದೇನೋ ಅಷ್ಟು ಸಾಲಕ್ಕೆ ದಾಖಲೆ

ಬರೆದುಕೊಟ್ಟಿದ್ದೇವೆ.

ಎಂ ಎಸ್ ರಾಘವೇಂದ್ರ ಇವರಿಗೂ ಕೂಡ ಕ್ರಯದ ಕರಾರು ಪತ್ರ ಬರೆದುಕೊಟ್ಟಿದ್ದೆ ಎಂದರೆ ನಿಜ. ಕೆ ವೆಂಕಟೇಶ್  ಇವರಿಗೂ ಕೂಡ ಕ್ರಯದ ಕರಾರು ಪತ್ರ ಬರೆದುಕೊಟ್ಟಿದ್ದೆ ಎಂದರೆ ನಿಜ. ಹಣಖಾಸಿನ ವ್ಯವಹಾರದ ಬಗ್ಗೆ ಮತ್ತು ನ್ಯಾಯಾಲಯದ ಮುಂದಿರುವ ದಾಖಲೆಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದರೂ ಕೂಡ ನ್ಯಾಯಾಲಯಕ್ಕೆ ಬಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿರುವ ಡಿ ವಿಜಯಲಕ್ಷ್ಮಿ ಎನ್ನುವ ಸಹಿ ನನ್ನ ಹೆಂಡತಿಯದ್ದಾಗಿರುತ್ತದೆ. ವಾದಿಗಳ ಪರ ವಕೀಲರು ಡಿ ವಿಜಯಲಕ್ಷ್ಮಿ ಎನ್ನುವ ಸಹಿ ಯನ್ನು ನಿಶಾನೆಯಾಗಿ ಗುರುತಿಸಲು ಕೋರಿಕೊಂಡಿದ್ದು ಸಹಿಗಳನ್ನು ನಿಪಿ-1(ಎಫ್) (ಜಿ) (ಹೆಚ್) ಎಂದು ಗುರುತಿಸಲಾಯಿತು. ನಿಪಿ-1(ಬಿ ) ಸಹಿ ಸಹ ನನ್ನ ಹೆಂಡತಿಯದ್ದಾಗಿರುತ್ತದೆ. 30.12.2016 ರಂದು ದಾವಾಸ್ತಿಯನ್ನು 6 ಲಕ್ಷ 70 ಸಾವಿರಕ್ಕೆ ಮಾರಾಟ ಮಾಡಲು ಒಪ್ಪಿರೂ.6 ಲಕ್ಷದ 50 ಸಾವಿರ ಪಡೆದುಕೊಂಡು ಕರಾರು ಪತ್ರ ಬರೆದುಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ರೂ.1 ಲಕ್ಷ ಸಾಲ ಪಡೆದಿದ್ದು ಸಾಲ ಮತ್ತು ಬಡ್ಡಿ ಎಲ್ಲಾ ತೀರಿಸಿದ್ದೇನೆ ಎಂದು ನುಡಿಯುತ್ತಾರೆ. ನಿಡಿ-1 ರಲ್ಲಿ ಸಾಲ ಪಡೆದುಕೊಂಡ ಬಗ್ಗೆ ನಮೂದು ಮಾಡಿಲ್ಲ ಎಂದರೆ ಸಾಕ್ಷಿ ಎಲ್ಲಾ ದಾಖಲೆಗಳನ್ನು ವಾದಿಯರೇ ಬರೆದುಕೊಂಡಿದ್ದಾರೆ ಎಂದು ನುಡಿಯುತ್ತಾರೆ. ನಮ್ಮ ಕುಟುಂಬದ ಹಣಖಾಸಿನ ತೊಂದರೆಗಾಗಿ ದಾವಾಸ್ತಿಯನ್ನು ವಾದಿಗೆ ಮಾರಾಟ ಮಾಡಲು ಒಪ್ಪಿ ಬರೆದುಕೊಟ್ಟಿದ್ದು ಈಗ ವಾದಿಯರಿಗೆ ಆಸ್ತಿ ಹೋಗುತ್ತದೆ ಎಂದು ಕರಾರು ಪತ್ರ ಬರೆದುಕೊಟ್ಟಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.  ದಾವಾಸ್ತಿಯನ್ನು ಮಾರಾಟ ಮಾಡುವ ಉದ್ದೇಶದಿಂದ ಕರಾರು ಪತ್ರ ಬರೆದುಕೊಟ್ಟಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

-



**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು